C.MIS No.8/2017 PW-1

**<u>ದಿನಾಂಕ 09.02.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಎದುರುದಾರರಾದ ಪರ ಶ್ರೀ ಜೆ ಪಿ ವಕೀಲರಿಂದಃ</u>**

ನಾನು ಆಭರಣ ಮತ್ತು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದು, ಅದನ್ನು ಹಿಂದಿರುಗಿಸುವವರೆವಿಗೂ ಮನೆಗೆ ಬರುವುದಿಲ್ಲವೆಂದು ಠಾಣೆಯಲ್ಲಿ ನಾನು ಹೇಳಿಕೆ ನೀಡಿರುತ್ತೇನೆಂದರೆ ಸುಳ್ಳು. ನಾನು ಹೇಳಿಕೆ ಕೊಟ್ಟಾಗಿನಿಂದ ಬೆಂಗಳೂರಿನಲ್ಲಿ ವಾಸವಿದ್ದೇನೆಂದರೆ ಸುಳ್ಳು. ವೈವಾಹಿಕ ಪುನರ್ ಸ್ಥಾಪನೆ ಕೋರಿ ಎದುರುದಾರರು ನನಗೆ ನೋಟೀಸ್ ಕೊಟ್ಟಿದ್ದರು ಎಂದರೆ ನಿಜ. ಈ ನೋಟೀಸ್ ಗೆ ನಾನು ಪ್ರತ್ಯುತ್ತರ ನೀಡಿರುತ್ತೇನೆಂದರೆ ನಿಜ. ನಂತರ ನಾನು ಮತ್ತು ಎದುರುದಾರರು ಹನಿಯೂರಿನಲ್ಲಿ ಜೀವನ ಮಾಡಲು ಪ್ರಾರಂಭ ಮಾಡಿದೆವು ಎಂದರೆ ಸಾಕ್ಷಿಯು ನಮ್ಮನ್ನು ಊರಿನಲ್ಲಿ ಬಿಟ್ಟು ಎದುರುದಾರರು ಬೆಂಗಳೂರಿಗೆ ಹೋದರು ಎಂದು ನುಡಿಯುತ್ತಾರೆ. ನಾನು ಹನಿಯೂರಿನಲ್ಲಿ ಎದುರುದಾರರ ಮನೆಯಲ್ಲಿ ಆಗ ವಾಸವಿದ್ದೆನು ಎಂದರೆ ನಿಜ. ಆ ಸಮಯದಲ್ಲಿ ನಾನು ಬಿ ವಿ ಹಳ್ಳಿ ಗ್ರಾಮದಲ್ಲಿ ಟೈಲರ್ ಶಾಪ್ ಪ್ರಾರಂಭ ಮಾಡಿದ್ದೆನು ಎಂದರೆ ನಿಜ. ಸಾಕ್ಷಿಯು ಮುಂದುವರೆದು ಕೋರೋನಾ ಸಮಯದಲ್ಲಿ ಮುಚ್ಚಿದೆವು ಎಂದು ನುಡಿಯುತ್ತಾರೆ. ಈಗ ನಾನು ಹನಿಯೂರಿನ ಎದುರುದಾರರ ಮನೆಯಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದೆ ಎಂದರೆ ನಿಜ. ಈಗ ನಾನು ಉದ್ದೇಶಪೂರ್ವಕವಾಗಿ ಹನಿಯೂರಿನ ಎದುರುದಾರರ ಮನೆಯನ್ನು ಬಿಟ್ಟು ಬಾಡಿಗೆ ಮನೆಯಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದೆ ಎಂದರೆ ಸಾಕ್ಷಿಯು ಎದುರುದಾರರ ಮನೆ ಇರಲು ಯೋಗ್ಯವಲ್ಲದ ಕಾರಣ ಬಾಡಿಗೆ ಮನೆ ಮಾಡಿದ್ದೇನೆಂದು ನುಡಿಯುತ್ತಾರೆ. ಮನೆ ಯೋಗ್ಯವಿಲ್ಲದ ಬಗ್ಗೆ ಅರ್ಜಿಯಲ್ಲಿ ತಿಳಿಸಿಲ್ಲ. ಎದುರುದಾರರಿಗೆ ಬಿ.ಪಿ, ಶುಗರ್ ಇರುವ ವಿಚಾರ ನನಗೆ ಗೊತ್ತಿಲ್ಲ. ಎದುರುದಾರರಿಗೆ 2 ಬಾರಿ ಹರ್ನಿಯಾ ಶಸ್ತ್ರ ಚಿಕಿತ್ಸೆಯಾಗಿದೆ ಎಂದರೆ ಗೊತ್ತಿಲ್ಲ. ಎದುರುದಾರರಿಗೆ ಬಲಗೈ ಶಸ್ತ್ರ ಚಿಕಿತ್ಸೆಯಾಗಿದೆ ಎಂದರೆ ಗೊತ್ತಿಲ್ಲ. ನಾನು ಮತ್ತು ಎದುರುದಾರರು 2014ರಿಂದ ಪ್ರತ್ಯೇಕವಾಗಿದ್ದೇನೆಂದರೆ ನಿಜ. ನಾನು 2014 ರಿಂದ ಇಲ್ಲಿಯವರೆವಿಗೂ ನಾನು ಎದುರುದಾರರ ಜೊತೆ ಜೀವನ ಮಾಡಲು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸುಳ್ಳು.ಈ ಬಗ್ಗೆ ನ್ಯಾಯಪಂಚಾಯತಿಯಾದ ಬಗ್ಗೆ ಅರ್ಜಿಯಲ್ಲಿ ತಿಳಿಸಿಲ್ಲ ಮತ್ತು ದಾಖಲೆ ಹಾಜರುಪಡಿಸಿಲ್ಲ. ಈಗ

ಎದುರುದಾರರು ಬೆಂಗಳೂರಿನಲ್ಲಿ ಇದ್ದಾರೆಂಬುದು ಗೊತ್ತಿದೆ ಆದರೆ ವಿಳಾಸ ಗೊತ್ತಿಲ್ಲ. ಎದುರುದಾರರ ಆರೋಗ್ಯ ಪರಿಸ್ಥಿತಿ ಬಗ್ಗೆ ಗೊತ್ತಿಲ್ಲ. ಎದುರುದಾರರು ಯಾವುದೇ ಕೆಲಸ ಮಾಡಲು ಆಗದೇ ಇರುವುದರಿಂದ ಅವರ ಅಣ್ಣ ಮತ್ತು ಅಕ್ಕನ ಮನೆಯಲ್ಲಿ ಆಶ್ರಯ ಪಡೆದಿದ್ದಾರೆಂದರೆ ಸುಳ್ಳು. ಎದುರುದಾರರ ಕೆಲಸ ಮತ್ತು ಅವರಿಗೆ ಕೈ ತುಂಬಾ ಹಣ ಬರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಎದುರುದಾರರ ತಾಯಿ ತೀರಿಕೊಂಡಾಗ ನಾನು ಊರಿಗೆ ಬಂದಿಲ್ಲ ಎಂದರೆ ಸಾಕ್ಷಿಯು ನಾನು ಆಗ ಆಸ್ಪತ್ರೆಯಲ್ಲಿದ್ದೆ ಎಂದು ನುಡಿಯುತ್ತಾರೆ. ನನ್ನ ಮಕ್ಕಳು ಅಂದರೆ 2 ಮತ್ತು 3ನೇ ಅರ್ಜಿದಾರರು ಚನ್ನಪಟ್ಟಣ, ಮೈಸೂರು, ಮಂಡ್ಯದಲ್ಲಿ ಶಿಕ್ಷಣ ಪಡೆದಿದ್ದಾರೆ. 2 ಮತ್ತು 3ನೇ ಅರ್ಜಿದಾರರನ್ನು ನನ್ನ ಜೊತೆಯಲ್ಲಿ ಇಟ್ಟುಕೊಂಡು ಶಿಕ್ಷಣ ಕೊಡಿಸಲು ತೊಂದರೆ ಇಲ್ಲ. ಸಾಕ್ಷಿ ಮುಂದುವರೆದು ಅವರ ಶಿಕ್ಷಣಕ್ಕೋಸ್ಕರ ದೂರ ಇಟ್ಟಿದ್ದೇನೆಂದು ನುಡಿಯುತ್ತಾರೆ. ಚನ್ನಪಟ್ಟಣದಲ್ಲಿ ಒಳ್ಳೆ ಶಿಕ್ಷಣ ವ್ಯವಸ್ಥೆ ಇದೆ ಎಂದರೆ ನಿಜ. ಮಕ್ಕಳನ್ನು ಕಾಲೇಜಿಗೆ ಸೇರಿಸುವ ಮೊದಲು ಫೀಸಿನ ಬಗ್ಗೆ ನ್ಯಾಯಾಲಯದಲ್ಲಿ ಪ್ರಸ್ತಾಪ ಮಾಡಿಲ್ಲ. ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ ಮತ್ತು ವಾಪಸ್ಸು ಮಾಡಿರುತ್ತಾರೆ. ನಾನು ಎಲ್ಲಾ ವರ್ಷದ ಫೀಸಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**